
TEACHER
11th Year Of Publication

ಜ್ಞಾನ–ವಿಜ್ಞಾನ
ಶಾಂತಿ–ಸಹಬಾಳ್ವೆ

# ಟೀಚರ್

ಶೈಕ್ಷಣಿಕ ಮಾಸಪತ್ರಿಕೆ

ಸಂಪುಟ: 11 ಸಂಚಿಕೆ: 11 ಪುಟ:40+4 ಜನವರಿ: 2013 ಬೆಲೆ: ರೂ.15.00



ಹಾಡುವ
ಕೊರಳಿಗೆ
ಟು ಒನ್ಸ ಟೂ
ತುರುಕಿ ಟೈ ಕಟ್ಟಿದರೆ.....

## ಕಣ್ಣೀರೊರೆಸುವ ವರ್ಷದ ನಿರೀಕ್ಷೆಯಲ್ಲಿ.....

ಭಾರತ ಜ್ಞಾನ ವಿಜ್ಞಾನ ಸಮಿತಿ, ಕರ್ನಾಟಕ



# ಪರಿಸರ ವಿಜ್ಞಾನಿಯೊಂದಿಗೆ ಒಂದು ಪಯಣ.......



ಎನ್. ಪ್ರಭಾ, ದೊಡ್ಡಬೆಳವಂಗಲ
9980787426
prabhadn@gmail.com


ದೊಡ್ಡಬಳ್ಳಾಪುರ ತಾಲ್ಲೂಕಿನ ಗುಂಡ್ಲಹಳ್ಳಿ ಎನ್ನುವ ಗ್ರಾಮವೊಂದು ಕಸದರಾಶಿಯ ನಡುವೆ ಉಸಿರುಗಟ್ಟಿ ಒದ್ದಾಡುತ್ತಿದ್ದರೆ ಈ ಗ್ರಾಮದ ಸುತ್ತಮುತ್ತಲ ಸುಮಾರು 15–20 ಗ್ರಾಮಗಳು ಕಸಸೃಷ್ಟಿಸಿರುವ ವಿವಿಧ ರೀತಿಯ ಕಲ್ಮಶಗಳಿಂದ ನರಳುವ ಸನ್ನಿವೇಶ ನಿರ್ಮಾಣವಾಗಿದೆ. ಬಿಬಿಎಂಪಿ ಕಸವನ್ನೊತ್ತು ಸಾಲು ಸಾಲು ಲಾರಿಗಳು ದಿನನಿತ್ಯ ಮೆರವಣಿಗೆಯಲ್ಲಿ ಸಾಗಿಬಂದು ಟನ್‌ಗಟ್ಟಲೆ ಕಸ ಸುರಿದು ಹಿಂತಿರುಗಿ ಹೋಗಿಬಿಡುತ್ತವೆ. ಆದರೆ ಅಲ್ಲಿಯೇ ಮನೆಮಾಡಿ, ಹಸು–ದನಕಟ್ಟಿ, ಬೇಸಾಯ ಮಾಡಿಕೊಂಡು ಮಕ್ಕಳುಮರಿಯೊಂದಿಗೆ ಬದುಕು ಕಟ್ಟಿಕೊಂಡಿರುವ ಬಡಜನತೆ ಹೋಗುವುದಾದರೂ ಎಲ್ಲಿಗೆ?

ಕಳೆದ ನಾಲ್ಕೈದು ವರ್ಷಗಳಿಂದ ಬಿಬಿಎಂಪಿಯ ಕಸದ ತೊಟ್ಟಿಯಾಗಿ ಪರಿವರ್ತಿತವಾಗುತ್ತಿರುವ ಈ ಪ್ರದೇಶದಲ್ಲಿ ಜನತೆಯ ಪ್ರತಿರೋಧವನ್ನೂ ಲೆಕ್ಕಿಸದೆ ಕಸದ ಲಾಬಿ ಕಾರ್ಯಾಚರಿಸುತ್ತಿದೆ. ಕಸದ ಗುತ್ತಿಗೆ ಹಿಡಿದಿರುವ ಅಲ್ಲಿನ ಕಂಪನಿ ಅತಿಯಾಸೆಗೆ ಬಲಿಯಾಯಿತೆಂದು ಕಾಣುತ್ತದೆ, ಬೆಂಗಳೂರಿನಲ್ಲಿ ಇತ್ತೀಚಿಗೆ ಬಿಗಡಾಯಿಸಿದ್ದ ಕಸದ ಸಮಸ್ಯೆಗೆ ಪರಿಹಾರಾತ್ಮಕವಾಗಿ ಮತ್ತೂ ಹೆಚ್ಚಿನ ಕಸವನ್ನು ತಾನೇ ಸಾಗಿಸಿಕೊಳ್ಳುವ ಏರ್ಪಾಡು ಮಾಡಿಕೊಂಡುಬಿಟ್ಟಿದೆ. ಮೊದಲೇ "ಕಸದ ಘಟ್ಟಗಳಾಗಿದ್ದ" ಜಾಗದಲ್ಲಿ ಮತ್ತಷ್ಟು ಕಸ ಸುರಿದು ಜನರ ತಾಳ್ಮೆಯನ್ನು ಪರೀಕ್ಷಿಸಲು ಹೊರಟಿದೆ ಈ ಕಂಪನಿ. ಈ ವಿಷಯವನ್ನು ಸ್ಥಳೀಯ ಬಿಜಿವಿಎಸ್ ಕಾರ್ಯಕರ್ತರು ಬೆಂಗಳೂರು ಗ್ರಾಮಾಂತರ ಜಿಲ್ಲಾ ಘಟಕದ ಗಮನಕ್ಕೆ ತಂದರು. ನೀರು, ನೈರ್ಮಲ್ಯ, ಪರಿಸರ, ಕೃಷಿ, ಸ್ಥಳೀಯ ಜೀವಿವೈವಿಧ್ಯ, ಜನರ ಆರೋಗ್ಯ ಮುಂತಾದವುಗಳ ಮೇಲೆ ದುಷ್ಪರಿಣಾಮ ಬೀರುತ್ತಿರುವ ಈ ಅವೈಜ್ಞಾನಿಕ ಮತ್ತು ಅಕ್ರಮ ತ್ಯಾಜ್ಯ ವಿಲೇವಾರಿಯ ಕುರಿತು ಜನರಿಗೆ ಹಳ್ಳಿ–ಹಳ್ಳಿಗಳಲ್ಲಿ ಅರಿವು ಮೂಡಿಸಬೇಕೆಂದು, ಕಸದ ಸಮಸ್ಯೆಗೆ ಶಾಶ್ವತ ಪರಿಹಾರೋಪಾಯಗಳನ್ನು ಸೂಚಿಸಲು ಸಾಧ್ಯವಾಗಬೇಕೆಂದೂ ಆಲೋಚಿಸಿದ ನಾವು ಈ ಕೆಲಸಕ್ಕೆ ಪರಿಸರ ವಿಜ್ಞಾನಿಯೊಬ್ಬರ ಮಾರ್ಗದರ್ಶನ ಪಡೆಯುವುದೇ ಸೂಕ್ತವೆಂದು ನಿರ್ಧರಿಸಿದೆವು.

ಭಾರತೀಯ ವಿಜ್ಞಾನ ಮಂದಿರದಲ್ಲಿಯೇ ಸೇವೆ ಸಲ್ಲಿಸುತ್ತಿರುವ ಪರಿಸರ ವಿಜ್ಞಾನಿಗಳಾದ ಪ್ರೊ.ಟಿ.ವಿ.ರಾಮಚಂದ್ರ ರವರು ನಾವು ಕರೆದ ಹಳ್ಳಿಗೆ ಬರಲು ಒಪ್ಪಿದ್ದು ತುಂಬಾ ಹರುಷ ತಂದಿತು. ನಮಗೆ ಅನುಕೂಲವೆನಿಸಿದ ಒಂದನ್ನು ಆರಿಸಿಕೊಳ್ಳಲು 2 ದಿನಾಂಕವನ್ನು ಸೂಚಿಸಿದ್ದರು. ಇಷ್ಟು ಸಾಕೆಂದುಕೊಂಡ ನಾವು ಸಿದ್ಧತೆ ಮಾಡುವ ಸಲುವಾಗಿ ಗೊಲ್ಲಹಳ್ಳಿ ಎನ್ನುವ ಗ್ರಾಮಪಂಚಾಯ್ತಿ ಕಚೇರಿಯಲ್ಲಿ ಪೂರ್ವಭಾವಿ ಸಭೆಯೊಂದನ್ನು ಕರೆದೆವು.

ಸುತ್ತ–ಮುತ್ತಲ ಮೂರ್‍ನಾಲ್ಕು ಗ್ರಾಮಗಳ ಜನಪ್ರತಿನಿಧಿಗಳು ಹಾಗೂ ನಾಗರಿಕರನ್ನು ಸೇರಿಸಿ ಮೊದಲು ಒಂದು




ಸಮಾವೇಶವನ್ನು ಮಾಡೋಣ, ಅದಕ್ಕೆ ಐಐಎಸ್‌ಸಿಯ ವಿಜ್ಞಾನಿಯೊಬ್ಬರು ಪಾಲ್ಗೊಳ್ಳಲು ಒಪ್ಪಿರುತ್ತಾರೆ ಎನ್ನುವ ಸಲಹೆಯನ್ನು ನಾನು ಮತ್ತು ಜಯಕುಮಾರ್ ಸಭೆಯ ಮುಂದಿಟ್ಟೆವು. ಈ ಸಲಹೆ ನಮ್ಮಿಂದ ಹೊರಬೀಳುತ್ತಿದ್ದಂತೆ ಸಭೆಯಲ್ಲಿ ಕುಳಿತಿದ್ದ ಸ್ಥಳೀಯ ಗ್ರಾಮ ಪಂಚಾಯ್ತಿ ಅಧ್ಯಕ್ಷರು, ಆ ವಿಜ್ಞಾನಿಗಳು ಕಂಪನಿ ಕಡೆ ವಾಲಿಬಿಟ್ಟರೆ ಏನುಮಾಡುವುದು ಎಂದರು? ಕಂಪನಿಗಳು ಎಂಥವರನ್ನು ಬೇಕಾದರು ಬುಕ್ ಮಾಡಿಬಿಡುತ್ತವೆ, ವಿಜ್ಞಾನಿಯೊಬ್ಬರು ಕಸದ ವಿಷಯಕ್ಕೆ ಇಲ್ಲಿಗೆ ಬರುತ್ತಾರೆಂದು ಸುದ್ದಿ ತಿಳಿದರೆ ಸಾಕು ಅವರ ಜಾಡು ಹಿಡಿದು ಅವರನ್ನೊಪ್ಪಿಸಿ ಅವರ ಪರವಾಗೇ ವಾದ ಮಂಡಿಸುವ ರೀತಿಯಲ್ಲಿ ಅವರನ್ನು ತಯಾರು ಮಾಡಿಬಿಡುತ್ತಾರೆ. ಇವರು ಅಂತಹ ವಿಜ್ಞಾನಿ ಅಲ್ಲವೆಂದು ಖಚಿತ ಮಾಡಿಕೊಂಡು ಇಲ್ಲಿಗೆ ಕರೆತನ್ನಿ ಎಂದುಬಿಟ್ಟರು. ಪಾಪ, ಈವರೆಗಿನ ಅವರ ಅನುಭವಗಳ ಸಾರಾಂಶ ಎನ್ನುವ ರೀತಿಯಲ್ಲಿ ಅವರ ಅಭಿಪ್ರಾಯವನ್ನು ಸಭೆ ಮುಂದೆ ಮಂಡಿಸಿದರು. ಚರ್ಚೆಯ ನಡುವೆ ಜಯಕುಮಾರ್ ಏನೇನೊ ಸಮಜಾಯಿಷಿ ಕೊಡುತ್ತಿದ್ದರು ಎನಿಸುತ್ತದೆ, ಅವರ ಮಾತಿನಿಂದ ಗಾಬರಿಗೊಂಡ ನನಗೆ ಅದು ಅರೆಪ್ರಜ್ಞಾವಸ್ಥೆಯಲ್ಲಿರುವವರಿಗೆ ಕೇಳುವಂತೆ ಕೇಳುತ್ತಿತ್ತಷ್ಟೆ. ನಾನು ಜಯಕುಮಾರ್ ಟಿವಿಆರ್ ಅವರ ಜೊತೆ ಮಾತನಾಡಬೇಕೆಂದುಕೊಂಡೆವು. ಅದರಂತೆ ಅಂದೇ ಸಂಜೆ ಅವರಿಗೊಂದು ಈಮೇಲ್ ಕಳಿಸಲಾಗಿ ಅವರು ಸಮಯ ನೀಡೇಬಿಟ್ಟರು. ನಾಡಿದ್ದು ಬೆಳಿಗ್ಗೆ 11.00 ಗಂಟೆಗೆ ಕಚೇರಿಗೆ ಬನ್ನಿ ಎಂದು ತಿಳಿಸಿದರು. ಸದ್ಯ, ಸಿಕ್ಕಿತಲ್ಲ ಮತ್ತೊಂದು ಅವಕಾಶ ಎಂದುಕೊಳ್ಳುತ್ತಾ ನಾವಿಬ್ಬರೂ ಸಮಯಕ್ಕೆ ಸ್ವಲ್ಪ ಮುಂಚಿತವಾಗಿಯೇ ಅವರ ಚೇಂಬರ್ ತಲುಪಿದೆವು. ಟಿವಿಆರ್ ತುಂಬಾ ಹಸನ್ಮುಖಿರಾಗೆ ಮಾತಿಗಾರಂಭಿಸಿದರು. ನಾವು ಸಭೆ ನಡೆಸಿದ ಕುರಿತು, ಸಭೆಯ ತೀರ್ಮಾನಗಳ ಕುರಿತು ತಿಳಿಸುತ್ತಾ ಈ ರೀತಿಯ ಸಮಸ್ಯೆಗೆ ಈ ಮುಂಚೆ ಎಂದಾದರು ನೀವು ಎದುರಾಗಿದ್ದಿರಾ? ಸರ್ ಎಂದೆವು. ಆಗ, ಮತ್ತೂ ಬೆಚ್ಚಿ ಬೀಳುವ ಸರದಿ ನಮ್ಮದಾಗಿತ್ತು. ಏಕೆಂದರೆ, ಬಿಬಿಎಂಪಿ ನಗರದ ಹೊರವಲಯಗಳಲ್ಲಿ ನಿರ್ವಹಣೆ ಮಾಡುತ್ತಿರುವ ತ್ಯಾಜ್ಯ ವಿಲೇವಾರಿಯ ಕುರಿತು ಅಧ್ಯಯನ ಮಾಡುವಂತೆ ಸರ್ಕಾರ ತಜ್ಞರ ಸಮಿತಿಯೊಂದನ್ನು ರಚಿಸಿ ಅದರಲ್ಲಿ ಟಿವಿಆರ್ ರವರನ್ನು ಸೇರಿಸಿದ್ದರಂತೆ. ಇವರು ತಮ್ಮ ವಿದ್ಯಾರ್ಥಿಗಳೊಂದಿಗೆ ಅಧ್ಯಯನಕ್ಕೆಂದು ಹೊರವಲಯಕ್ಕೆ ಭೇಟಿನೀಡಿದಾಗ ಕಸದ ಲಾರಿಯನ್ನೇ ಇವರ ಮೇಲೆ ಹತ್ತಿಸಿಬಿಡುವಂತಹ ಪ್ರಯತ್ನಗಳನ್ನೆಲ್ಲಾ ಮಾಡಿದ ಕಸದ ಲಾಬಿಯ ಬಗ್ಗೆ ಒಂದೊಂದೇ ಕಥೆಗಳನ್ನು ಬಿಚ್ಚಿಡುತ್ತಾ ಹೋದ ಟಿವಿಆರ್ ಮುಂದೆ ನಾವು ಬೆಚ್ಚಿ-ಬೆಚ್ಚಿ ಕೂತೆವು. ಯಾವ ಪರಿಸರ ಹೋರಾಟಗಾರರಿಗೂ ಕಡಿಮೆ ಇಲ್ಲದಂತಹ ರೋಚಕ ಕಥೆಗಳನ್ನು ನಮ್ಮೆದುರು ಬಿಚ್ಚಿಟ್ಟ ಟಿವಿಆರ್ ನಮ್ಮೆದುರಿದ್ದ ಸಂಶಯಗಳಿಗೆಲ್ಲ ತಾವಾಗೆ ಉತ್ತರ ನೀಡಿದ್ದರು. ಮಾತಿನ ಮಧ್ಯೆ ಗುಂಡ್ಲಹಳ್ಳಿಯ ಬಳಿ ಕೆಲಸ ನಿರ್ವಹಿಸುತ್ತಿರುವ ಕಂಪನಿ ಪರಿಚಯ ಇದೆಯಾ ಸರ್ ಎಂದೆ. ಯಾಕಿಲ್ಲ? ಅವರಿಗೂ ನಾನು ದುಸ್ವಪ್ನವೇ ಆಗಿದ್ದೇನೆ ಎಂದರು. ಎಂತದೇ ವಿಷಮಯ ವಾತಾವರಣವನ್ನೂ ಲೆಕ್ಕಿಸದೇ ಕೊಡಬೇಕಾದ ನೈಜ ವರದಿಯನ್ನೇ ಸರ್ಕಾರಕ್ಕೆ ಸಲ್ಲಿಸಿದ್ದನ್ನು ತಿಳಿಸಿದರು. ನಿಜವಾಗಿಯೂ ಇವರ ಅನುಭವಗಳನ್ನು ಕೇಳುತ್ತಾ ಹೋದಂತೆಲ್ಲಾ ಎದುರು ಕುಳಿತಿದ್ದ ನಾವು ಕುಬ್ಜರಾಗುತ್ತಾ ಹೋದೆವು. ನಾವು ಮಾತ್ರವೇ ಪ್ರಾಮಾಣಿಕರಿರಬೇಕೆಂಬ ನಮ್ಮ ಸಂಶಯಕ್ಕೂ ಉತ್ತರ ಹೇಳಿದ್ದರು. ಅಂತೂ, ಇಂಥವರೇ ಸಿಕ್ಕಿದ ಮೇಲೆ ನಮಗಿನ್ನೇನು ಚಿಂತೆ ಎನ್ನುವ ನಿರಾಳ ಭಾವದಿಂದ ನಾವಿಬ್ಬರು ಅಲ್ಲಿಂದ ಹಿಂತಿರುಗಿದೆವು.

ನಾವು ನಿಗದಿಪಡಿಸಿದ ಕಾರ್ಯಕ್ರಮದ ದಿನದಂದು ಅವರನ್ನು ಕಾರಿನಲ್ಲಿ ಕರೆದುಕೊಂಡು ಚಿಕ್ಕಬೆಳವಂಗಲ ಎನ್ನುವ ಗ್ರಾಮದ ಕಡೆ ಹೊರಟೆವು. ದಾರಿಯುದ್ದಕ್ಕೂ ಅವರು ನಿರ್ವಹಿಸುತ್ತಿರುವ ವಿವಿಧ ಜವಾಬ್ದಾರಿಗಳ ಬಗ್ಗೆ ತಮ್ಮ ಅನುಭವಗಳನ್ನು ತಿಳಿಸುತ್ತಲೇ ಹೋದರು. ಇಷ್ಟೆಲ್ಲಾ ಒತ್ತಡದ ನಡುವೆಯು ವಿಜ್ಞಾನದ ವಿಷಯಗಳನ್ನು ಶಾಲಾ ಮಕ್ಕಳು, ನಾಗರಿಕರಿಗೆ ತಲುಪಿಸುವ ಸಲುವಾಗಿ ಶಾಲಾ

ಕಾರ್ಯಕ್ರಮಗಳಿಗೆ ಭೇಟಿ ನೀಡುವುದು, ವಿವಿಧ ಜಿಲ್ಲೆಗಳಿಗೆ ಪ್ರವಾಸ ಮಾಡುವುದು, ತರಬೇತಿಗಳನ್ನು ನೀಡುವುದು ಹೀಗೆ ಹಲವು ರೀತಿಯಲ್ಲಿ ತೊಡಗಿಕೊಂಡಿರುವ ಅವರ ಸಮಾಜಮುಖಿ ಚಟುವಟಿಕೆಗಳನ್ನೂ ವಿವರಿಸುತ್ತಾ ಹೋದರು. ನಾವು ಸಮಾಜಕ್ಕೆ ಏನಾದರು ಕೊಡುಗೆ ಕೊಡಲೇಬೇಕು. ಜನರ ಕಷ್ಟಸುಖಗಳಿಗೆ ಸಮಾಜದ ಆಗುಹೋಗುಗಳಿಗೆ ಸ್ಪಂದಿಸಬೇಕು. ವಿಜ್ಞಾನಿಗಳು ದಂತಗೋಪುರಗಳಲ್ಲಿ ಕುಳಿತುಕೊಳ್ಳಬೇಕಿಲ್ಲ. ವಿಜ್ಞಾನ ಅವರಿಂದ ಸಮಾಜದ ಭಾಗವಾಗಿ ಹರಿದುಬರುವಂತಾಗಬೇಕು. ಭಾರತೀಯ ವಿಜ್ಞಾನ ಮಂದಿರದಂತಹ ಸಂಸ್ಥೆಗಳು ಪ್ರಾರಂಭವಾಗಿದ್ದೆ ಈ ಉದ್ದೇಶದಿಂದ ಎನ್ನುತ್ತಾ ನೀವು ಕೈಗೊಳ್ಳುವ ಪರಿಸರ ಪ್ರೇಮಿ ಕೆಲಸಗಳಿಗೆ ನನ್ನ ಅಗತ್ಯವಿದ್ದಲ್ಲಿ ಖಂಡಿತಾ ನನ್ನ ಬೆಂಬಲವಿದೆಯೆಂದರು.

ಕಾರ್ಯಕ್ರಮಕ್ಕೆ ಪಿಪಿಟಿ ಸಿದ್ಧಪಡಿಸಿಕೊಂಡು ಬಂದಿದ್ದ ಅವರಿಗೆ ಸಭಾಂಗಣದಲ್ಲಿ ನಿರಾಸೆಯೇ ಆಯಿತು. ನಾವು ತೆಗೆದುಕೊಂಡು ಹೋಗಿದ್ದ ಎಲ್.ಸಿ.ಡಿ ಕೆಲಸ ನಿರ್ವಹಿಸಲೇ ಇಲ್ಲಾ. ನಾವು ಕಲಿತಿದ್ದ ವಿದ್ಯೆಗಳನ್ನೆಲ್ಲಾ ಪ್ರಯೋಗ ಮಾಡಿದರೂ ಕಂಪ್ಯೂಟರ್ ಜೊತೆ ಸಂಪರ್ಕ ಬೆಸೆಯುತ್ತಿದ್ದಂತೆ ಎಲ್.ಸಿ.ಡಿ ಮುನಿಸಿಕೊಳ್ಳುತ್ತಿತ್ತು. ವಿಫಲ ಪ್ರಯತ್ನಗಳನ್ನು ಮಾಡಿ-ಮಾಡಿ ಸುಸ್ತಾದ ನಾವು ಕೈಚೆಲ್ಲಿ ಕುಳಿತಾಗ ಸಭಿಕರೊಂದಿಗೆ ಸಂವಾದಕ್ಕಿಳಿಯುವ ಮೂಲಕ ಸ್ವತಃ ಅವರೇ ಚರ್ಚೆಗೆ ಚಾಲನೆ ನೀಡಿದರು. ಒಂದು ಹಂತದಲ್ಲಿ ಸಭಿಕರು ಇವರನ್ನೇ ತರಾಟೆಗೆ ತೆಗೆದುಕೊಂಡು ನೀವು ಅದನ್ನೇಕೆ ಮಾಡಬಾರದು, ಇದನ್ನೇಕೆ ಮಾಡಬಾರದು, ಅದರಿಂದೇನು ಲಾಭ, ನಿಮ್ಮಿಂದೇನು ಲಾಭ, ಮಂದೇನು ಮಾಡುವಿರಿ ಎಂದು ತಗಾದೆ ತೆಗೆದರು. ಕಸದ ಸಮಸ್ಯೆಗೆ ಇವರೇ ಕಾರಣರೆಂಬಂತೆ ಇವರೊಂದಿಗೆ ವಾಗ್ವಾದಕ್ಕಿಳಿದರು. ಸರ್ಕಾರದ ಪ್ರತಿನಿಧಿಯಾಗಿ ಬಂದಿದ್ದಾರೇನೊ ಎಂಬಂತೆ ಇವರ ಮೇಲೆ ಪ್ರಶ್ನೆಗಳ ಸುರಿಮಳೆಗೈದರು. ಎಲ್ಲವನ್ನೂ ಕೇಳಿಕೊಂಡ ಟಿ.ವಿ.ಆರ್ ಪ್ರತಿಯೊಂದು ಪ್ರಶ್ನೆಗೂ ತಾಳ್ಮೆಯಿಂದ ಉತ್ತರ ಹೇಳುತ್ತಿದ್ದರು. ಕೊನೆಯಲ್ಲಿ ನಿಮ್ಮೆಲ್ಲರ ಜೊತೆಯಲ್ಲಿ ನಾನೂ ಇರುತ್ತೇನೆ. ನಿಮಗೆ ಬೇಕಾದ ವೈಜ್ಞಾನಿಕ ಮಾಹಿತಿಗಳನ್ನು ಖಂಡಿತ ಒದಗಿಸಿಕೊಡುತ್ತೇನೆ ನೀವು ಪ್ರಯತ್ನಗಳನ್ನು ಮುಂದುವರೆಸಿ ಸುಮ್ಮನೆ ದೂರುವುದರಿಂದ ಏನು ಬಗೆಹರಿಯುವುದಿಲ್ಲ ಎಂದರು.

ಕಾರ್ಯಕ್ರಮ ಮುಗಿದ ನಂತರ ಬಿಜಿವಿಎಸ್ ಸ್ಥಳೀಯ ಕಾರ್ಯಕರ್ತ ವಿಜಯಕುಮಾರ್ ಮನೆಯಲ್ಲಿ ಏರ್ಪಡಿಸಿದ್ದ ಸರಳ ಊಟದಲ್ಲಿ ಸಂಘಟಕರೊಂದಿಗೆ ಪಾಲ್ಗೊಂಡು ನೆಲದ ಮೇಲೆ ಕೂತು ಊಟ ಸವಿದರು. ಸರಿ, ಊಟ ಮುಗಿಸಿ ಅಲ್ಲಿಂದ ಹೊರಟು ಕಾರಿನಲ್ಲಿ ಪ್ರಯಾಣ ಬೆಳಸುವಾಗ ಮತ್ತೆ ಮಾತು-ಕತೆಗೆ ಎಳೆದೆವು. ಮಾತಿನ ನಡುವೆ, ಪೂರ್ವಸಿದ್ಧತಾ ಸಭೆಯಲ್ಲಿ ಗ್ರಾಮ ಪಂಚಾಯ್ತಿ ಅಧ್ಯಕ್ಷರು ವ್ಯಕ್ತಪಡಿಸಿದ್ದ ಸಂಶಯವನ್ನು ಅವರ ಗಮನಕ್ಕೆ ತಂದು ಅವರ ಪ್ರತಿಕ್ರಿಯೆ ಹೇಗಿರುತ್ತದೆಂದು ಕುತೂಹಲದಿಂದ ನಿರೀಕ್ಷಿಸಿದೆ. ಅದಕ್ಕವರು, ಅವರ ಅನಿಸಿಕೆಯಲ್ಲಿ ತಪ್ಪೇನಿದೆ. ಅವರ ಅಭಿಪ್ರಾಯ ಸಹಜವಾಗಿಯೇ ಇದೆಯಲ್ಲ. ಯಾರನ್ನೂ ನಂಬದ ಸ್ಥಿತಿ ಸಮಾಜದಲ್ಲಿ ನಿರ್ಮಾಣವಾಗಿರುವಾಗ ವಿಜ್ಞಾನಿಗಳನ್ನೂ ಸಂಶಯಿಸುವುದರಲ್ಲಿ ಆಶ್ಚರ್ಯವೇನಿದೆ ಎಂದು ಸಲೀಸಾಗಿ ಪ್ರತಿಕ್ರಿಯಿಸಿದರು. ವಿಜ್ಞಾನಿಗಳು, ಸಂಶೋಧನಾ ಕೇಂದ್ರಗಳು, ವಿಜ್ಞಾನ ಸಂಸ್ಥೆಗಳು ಜನಮುಖಿಯಾದಾಗ ಮಾತ್ರ ನಮ್ಮ ಬಗ್ಗೆ ಜನರಲ್ಲಿ ಒಲವು-ವಿಶ್ವಾಸ ಮೂಡುತ್ತದೆಂದರು ಟಿ.ವಿ.ಆರ್. ನಮ್ಮ ವಿಜ್ಞಾನ ಮಂದಿರದಲ್ಲಿ ಅಂತಹ ವಿಜ್ಞಾನಿಗಳಿದ್ದಾರೆ, ನಾನು ಎಷ್ಟೋ ಶಾಲೆಗಳಿಗೆ ಭೇಟಿ ಕೊಟ್ಟಾಗ ಸಂದರ್ಶಕರ ಪುಸ್ತಕದಲ್ಲಿ ಸಹಿ ಮಾಡುವಂತೆ ನನ್ನನ್ನು ಕೇಳುತ್ತಾರೆ, ಸಹಿಮಾಡಿ ಕುತೂಹಲಕ್ಕೆ ಪುಟಗಳನ್ನು ಹಿಂದಿರುಗಿಸಿ ನೋಡಿದಾಗ ಎಷ್ಟೋ ಕಡೆಗಳಲ್ಲಿ ಐ.ಐ.ಎಸ್.ಸಿ ಯ ನಿರ್ದೇಶಕರಾದ ಬಲರಾಂರವರ ಸಹಿಯನ್ನೇ ನೋಡಿದ್ದಿದೆ ಎಂದು ಸ್ಮರಿಸಿದರು. 2 ಗಂಟೆಗೆ ಮರಳಿ ಬರುವ ಯೋಜನೆಯೊಂದಿಗೆ ನಮ್ಮೊಂದಿಗೆ ಬಂದಿದ್ದ ಟಿ.ವಿ.ಆರ್ ವಾಪಸ್ಸು ತಮ್ಮ ಕೊಠಡಿ ಸೇರದಾಗ ಸಮಯ 4 ದಾಟಿತ್ತು, ಕೊಠಡಿಯೊಳಗೆ ಕಿಕ್ಕಿರಿದು ತುಂಬಿದ್ದ ವಿದ್ಯಾರ್ಥಿಗಳೊಂದಿಗೆ ಮತ್ತವರು ಲೀನವಾದರು.

ಇಡೀ ಸಮಾಜವೇ ಕಲುಷಿತಗೊಂಡಿದೆಯೆಂದು, ನಿರಾಶಾದಾಯಕ ವಾತಾವರಣ ನಿರ್ಮಾಣವಾಗಿದೆಯೆಂದು ಜನ ಗೊಣಗಿ-ಗೊಣಗಿ ತಮ್ಮ ಮೇಲಿನ ಜವಾಬ್ದಾರಿಗಳನ್ನು, ತಾವು ನಿರ್ವಹಿಸಬೇಕಾದ ಪಾತ್ರಗಳನ್ನು, ಕಂಡುಕೊಳ್ಳಬೇಕಾದ ಉತ್ತಮ ದಾರಿಗಳನ್ನು ಮರೆತುಬಿಡುವ ಬದಲು ಭರವಸೆಗಳನ್ನು ಮೂಡಿಸಬಲ್ಲ ಇಂತಹ "ಬೆಳಕಿನ ಕಿಡಿ" ಗಳ ಕಡೆಗೆ ನೋಡಬಾರದೇಕೆ?

ಟೀಚರ್